ಸರ್ಕಾರೀ ನೌಕರರ ವಸತಿ ಗೃಹಗಳ ಬಗ್ಗೆ.

೭೮. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ರಾಜಾಜಿನಗರ, ಜೀವನಬೀಮಾನಗರ ಮತ್ತಿತರ ಕಡೆಗಳಲ್ಲಿ ಸರ್ಕಾರಿ ನೌಕರರಿಗೆ ಕಟ್ಟಿಸಲಾಗಿರುವ ವಸತಿ ಗೃಹಗಳನ್ನು ಸರ್ಕಾರಿ ನೌಕರರಿಗೆ ಬಾಡಿಗೆ ಆಧಾರದಲ್ಲಿ ಕೊಡಲಾಗಿದೆಯಲ್ಲವೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಬಾಡಿಗೆ ಎಷ್ಟು ವಸೂಲಿ ಮಾಡಲಾಗುತ್ತಿದೆ ?

ಇ) ಈ ವಸತಿ ಗೃಹಗಳಿಗೆ ಒಂದೇ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ವಸತಿ ಗೃಹದ ಅಲಾಟ್‌ದಾರ ನೌಕರರು ಪಡೆಯುವ ಒಟ್ಟು ಸಂಬಳದ ಶೇಕಡ ೧೦ ರಷ್ಟು ಅಥವಾ ಅವರಿಗೆ ಸಲ್ಲುವ ಮನೆಬಾಡಿಗೆ ಭತ್ಯೆ ಇವುಗಳಲ್ಲಿ ಯಾವುದು ಹೆಚ್ಚೋ ಆದನ್ನು ನಿಯಮಗಳ ಪ್ರಕಾರ ಸರ್ಕಾರಿ ಗೃಹದ ಬಾಡಿಗೆಯಾಗಿ ವಸೂಲು ಮಾಡಲಾಗುತ್ತಿದೆ.

ಇ) ವಿವಿಧ ಬಡಾವಣೆಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ವೇತನ ಶ್ರೇಣಿಗಳಿರುವ ಸರ್ಕಾರಿ ನೌಕರರಿಗೆ ವಸತಿ ಗೃಹಗಳನ್ನು ಕಟ್ಟಿಸಲಾಗಿರುವುದರಿಂದ ಒಂದೇ ರೀತಿಯ ಸೌಲಭ್ಯವನ್ನು ಕಲ್ಪಿಸಲಾಗಿರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ, ನನ್ನ (ಇ) ಪ್ರಶ್ನೆ ಈ ವಸತಿ ಗೃಹಗಳಿಗೆ ಒಂದೇ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ ಎಂದು ಕೇಳಿದ್ದೇನೆ. ಮಾನ್ಯ ಮಂತ್ರಿಯವರು ವಿವಿಧ ಬಡಾವಣೆಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ವೇತನಶ್ರೇಣಿಗಳಿರುವ ಸರ್ಕಾರಿ ನೌಕರರಿಗೆ ವಸತಿ ಗೃಹಗಳನ್ನು ಕಟ್ಟಿಸಲಾಗಿರುವುದರಿಂದ ಒಂದೇರೀತಿಯ ಸೌಲಭ್ಯವನ್ನು ಕಲ್ಪಿಸಲಾಗಿರುವುದಿಲ್ಲ ಎಂದು ಹೇಳಿದ್ದಾರೆ. ಈ ಒಂದು ತಾರತಮ್ಯವನ್ನು ಹೋಗಲಾಡಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ೬೧,೬೬,೬೧ರಲ್ಲಿ ಹೀಗೆ ಒಂದೊಂದು ಕಡೆ ಸರ್ಕಾರೀ ನೌಕರರ ವಸತಿ ಗೃಹಗಳನ್ನು ಕಟ್ಟಿಸಲಾಗಿದೆ. ರಾಜಾಜಿನಗರ, ಜೀವನ ಭೀಮಾನಗರ, ತಿಮ್ಮೇನಹಳ್ಳಿ ಹಾಗೂ ಯಲಹಂಕಗಳಲ್ಲಿ ಅಯಾಯಾ ಸಂದರ್ಭಗಳಲ್ಲಿದ್ದಂಥ ಅನುಕೂಲಗಳನ್ನು ನೋಡಿಕೊಂಡು ಗೃಹಗಳನ್ನು ಕಟ್ಟಿಸಲಾಗಿದೆ. ಮತ್ತೆ ಅವುಗಳನ್ನು ಮಾರ್ಪಾಡು ಮಾಡುವುದಕ್ಕೆ ತಂಬ ಹಣ ಬೇಕಾಗುವುದರಿಂದ ಅವುಗಳನ್ನು ಬದಲಾವಣೆ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಒಂದು ಕಡೆ ಕನಿಷ್ಟ ಅನುಕೂಲಗಳು ಇದೆ, ಒಂದು ಕಡೆ ಇಲ್ಲ. ವೇತನ ಶ್ರೇಣಿ ಮಾತ್ರ ಒಂದೇ ಇದೆ. ಹಳೇ ಕಾಲದಲ್ಲಿ ಕಟ್ಟಿರತಕ್ಕ ಕೊಠಡಿಗಳ ವಿಸ್ತಾರ ಕಡಿಮೆ ಇರಬಹುದು, ಇಂದು ಕಟ್ಟಿರುವಂಥ ಕೊಠಡಿಗಳ ವಿಸ್ತಾರ ಜಾಸ್ತಿ ಇರಬಹುದು. ಆದರೆ, ಇವತ್ತು ಅವಶ್ಯಕವಾಗಿ ಕಕ್ಕಸುಗಳು, ಸ್ನಾನದ ಮನೆ ಎ.ಇ.ಎಚ್. ಇರಲೇಬೇಕು. ಇಂಥ ಅನುಕೂಲಗಳನ್ನು ನೀವು ಏತಕ್ಕೆ ಮಾಡಿಕೊಟ್ಟಿಲ್ಲ ? ಈಗಲಾದರೂ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಕೆಲವು ಕಡೆ ಕನಿಷ್ಟ ಅನುಕೂಲತೆಗಳ ಆಗತ್ಯ ಇದೆ. ಮಾನ್ಯ ಸದಸ್ಯರು ಎ ಇ ಹೆಚ್.ಗೆ ಸಂಬಂಧಪಟ್ಟಂತೆ ಒಹಳ ಒತ್ತಾಯ ಮಾಡಿದ್ದಾರೆ. ನನ್ನನ್ನು ಕೂಡ ಕರೆದುಕೊಂಡು ಹೋಗಿ ತೋರಿಸಿದ್ದಾರೆ. ಎ.ಇ.ಎಚ್. ಕೆಲಸವನ್ನು ಹಣಕಾಸಿನ ತೊಂದರೆಯಿಂದ ಮಾಡುವುದಕ್ಕಾಗದೇ ವಿಳಂಬವಾಗಿದೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಸ್ವಾಮಿ, ವೈರಿಂಗ್ ಎಲ್ಲಾ ಮಾಡಿ, ಕನೆಕ್ಷನ್ ಮಾಡದೆ ಉಳಿಸಿ ಕೋಡಿದ್ದಾರೆ. ಕಕ್ಕಸ್ಸುಗಳು ಇಲ್ಲ. ಹೀಗಾದರೆ ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ.— ಕಕ್ಕಸ್ಸುಗಳು ಸರಿಯಿಲ್ಲದೇ ಇದ್ದರೆ, ಸರಿ ಮಾಡಿಸೋಣ.